ಕಣ್ಣಾಡಿಸಿದ. ''ಸರ್, ಅವ್ನು ಬರಾಂಗಿಲ್ರಿ. ನಾ ಒಬ್ಬಾಕೀನ ಬಂದಿನ್ರಿ. ಟ್ರೇನ್ ಮೇಲಿಂದ್ಲೇ ನೀವ್ ಇಲ್ಲಿ ಕೂತದ್ದ್ ಕಾಣ್ತುರೀ... ಅದ್ಕೇ ಇಳ್ಕೊಂಡು ಈ ಕಡೆ ಬಂದನ್ರೀ... ನಿಮ್ಮ ಮೀಟ್ ಮಾಡ್ಬೇಕಂತ ಖೂಬ್ ದಿವಸದಿಂದ ಕಾಯ್ತಾ ಇದ್ದಿನ್ರಿ..." ಎಂದಳು. ಹುಡುಗ ಯಾಕೆ ಬರುವುದಿಲ್ಲ ಮತ್ತು ನನ್ನನ್ನು ಯಾಕೆ ಭೇಟಿ ಮಾಡುವುದು ಎನ್ನುವ ಪ್ರಶ್ನೆಗಳು ಶಾಂತಾರಾಮನ ಮುಖದಲ್ಲಿ ಪ್ರಕಟವಾದವು. ''ಸರ್, ಆ ದಿನ ನೀವು ಎದ್ದು ಹೋದಾಗ ಈ ಬೆಂಚ್ ಮೇಲೆ ಕವಿತಾ ಕತಿ ಬರೆದ ಪೇಪರ್ಸ್ ತುಂಬಾ ಬಿದ್ದಿದ್ವುರೀ... ನಾನು ಅವನೆಲ್ಲ ಎತ್ಕೊಂಡಿದ್ದೆ... ನೀವು ಮತ್ತೆ ಈ ಕಡೆ ಬರಲೆ ಇಲ್ಲ. ನಂಗೆ ಕನ್ನಡ ಓದೋಕೆ ಬರಾಂಗಿಲ್ರಿ... ನಮ್ಮ ಮಮ್ಮಿ ಓದಿದ್ರುರೀ... ತುಂಬಾ ಲೈಕಾಯ್ತುರೀ... ಪ್ರೇಮವನ್ನು ವ್ಯಾಮೋಹದಿಂದ ಇಂಟೆನ್ಸ್ ಆಗಿ ಬರೀತಾರೆ ಅಂತಿಳ್ತಾರ್ರೀ... ನಿಮ್ಮನ್ನ ಮೀಟ್ ಮಾಡ್ದೆ ಅಂದ್ರೆ ಖೂಬ್ ಖುಷಿಯಾಗ್ತಾಳೆ" ಎಂದಳು. ತಂಪಾಗುತ್ತಿದ್ದ ಸಂಜೆ ವಾತಾವರಣದಲ್ಲಿ ಹೊಳಪುಕಣ್ಣುಗಳ ಸುಂದರ ನಗೆಯ ಹುಡುಗಿಯ ಚೆಲುವು ಮತ್ತು ಮಾತು ಶಾಂತಾರಾಮನನ್ನು ಉಲ್ಲಸಿತಗೊಳಿಸಿತ್ತು. ಆ ಹುರುಪಿನಲ್ಲಿ ''ಎಲ್ಲಿ ನಿನ್ನ ಜೊತೆಹಕ್ಕಿ ಯಾಕಿನ್ನೂ ಈ ಪ್ರೇಮಪೀಠದತ್ತ ಬಂದಿಲ್ಲ?'' ಅಂದ. ಅವಳು ''ಅಯ್ಯೋ, ಆ ಹಕ್ಕಿ ಮತ್ತೆ ಇತ್ತ ಬರೋಲ್ಲ ಸರ್, ಎರಡೇ ತಿಂಗಳಲ್ಲಿ ದೂರ ಹಾರಿ ಹೋಗಿದೆ'' ಎಂದು ಅವನದೇ ಧ್ವನಿಯಲ್ಲಿ ಉತ್ತರಿಸಿ ದೊಡ್ಡದಾಗಿ ನಕ್ಕಳು. ಶಾಂತಾರಾಮನ ಕಥಾಭಿತ್ತಿಯಲ್ಲಿ ಮತ್ತೆ ವಿಫಲಪ್ರೀತಿ ವಿಷಾದದ ಮುದ್ರೆಯೊತ್ತಿ ಮೌನವಾಗಿರಲು ಹುಡುಗಿಯೇ, ''ಅಲ್ನೋಡಿ, ಸನ್‌ಸೆಟ್ ಎಷ್ಟು ಚಂದಾಗಿದೆ'' ಅಂದಳು. ಶಾಂತಾರಾಮ ''ನಿನ್ನ ಹುಡುಗನನ್ನು ಮಿಸ್ ಮಾಡ್ಕೊಳ್ಳಲ್ವಾ?'' ಅಂದ. ''ವ್ಹಾಟ್ ನಾನ್ಸೆನ್ಸ್! ನೀವು ನನ್ಮಮ್ಮೀ ಥರಾನೇ ಅಂತೀರಾ. ಪ್ರೀತಿಲಿ ಮೋಸ ಹೋದೆ ಅಂತ ಕೊರಗ್ತಾ ಆಯಸ್ಸನ್ನೇ ಕಳೆದ್ಲು... ಪ್ರೀತಿ ಇಲ್ಲದ ಮ್ಯಾಲೆ ಅಂಟಿಕೊಂಡಿರಬಾರದು... ದುನಿಯಾ ಚಿಕ್ಕದಾಗಿದೆ. ಫಿರ್ ಸೆ ಪ್ಯಾರ್ ಹೋಜಾಯೇಗಾ ಸರ್ ಜೀ!'' ಎಂದು ಸುಂದರವಾಗಿ ನಕ್ಕಳು.

ಆ ಪುಟ್ಟ ಚೆಲುವೆಯ ಆತ್ಮವಿಶ್ವಾಸದ ನೋಟಕ್ಕೆ ತನ್ನಲ್ಲುಳಿದ ಪ್ರಶ್ನೆಗಳೆಲ್ಲವೂ ನಾನ್ಸೆನ್ಸ್ ಅನಿಸಿ ಶಾಂತಾರಾಮ ಸುಮ್ಮನಾದ!


## ರಾಜೀವ ನಾರಾಯಣ ನಾಯಕ

ಪ್ರಸ್ತುತ ಮುಂಬಯಿಯಲ್ಲಿ ಕೇಂದ್ರ ಸರಕಾರಿ ಸೇವೆಯಲ್ಲಿರುವ ರಾಜೀವ ಅವರ ಕಥಾ ಸಂಗ್ರಹ 'ಗುರ್ಬಾಣಕ್ಕಿ'. ಮುಂಬಯಿ ಕರ್ನಾಟಕ ಸಂಘ ಇದನ್ನು ಪ್ರಕಟಿಸಿದೆ. ಅವರು ಮುಂಬಯಿಯ ಕನ್ನಡ ರಂಗಭೂಮಿಯಲ್ಲೂ ಸಕ್ರಿಯರು.